# ಹುಲಿಕೆರೆಯ ಪುರಾತನ ಪುಷ್ಕರಣಿ

**ವಿಶ್ವಪ್ರಸಿದ್ಧ ಪ್ರವಾಸಿ ತಾಣ ಹಳೇಬೀಡಿನಿಂದ ಕೇವಲ ಎರಡು ಮೈಲಿ ದೂರದಲ್ಲಿ ಈ ಸುಂದರ ಪುಷ್ಕರಣಿಯಿದೆ. ಆದರೆ ಬಹುತೇಕ ಅಜ್ಞಾತವಾಗಿದೆ. ಪ್ರವಾಸೋದ್ಯಮ ಇಲಾಖೆಯವರು ಮನಸ್ಸು ಮಾಡಿದರೆ ಇದನ್ನೂ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿಸಬಹುದು.**

■ ಚಿತ್ರ– ಲೇಖನ: **ಮಂಜುನಾಥ, ಡಿ.ಎಸ್.**



ಶಿಲ್ಪಕಲಾ ನೈಪುಣ್ಯದ ಬೇಲೂರು ಮತ್ತು ಹಳೇಬೀಡಿನ ದೇವಾಲಯಗಳು ವಿಶ್ವವಿಖ್ಯಾತ. ಹಳೇಬೀಡಿನಿಂದ ಕೇವಲ ಎರಡು ಮೈಲಿ ದೂರದಲ್ಲಿರುವ ಪುರಾತನ ಪುಷ್ಕರಣಿ ಮಾತ್ರ ಅಜ್ಞಾತ! ಇದೆಂತಹ ವಿಪರ್ಯಾಸ? ಅದೂ ಶಿಲ್ಪಸೌಂದರ್ಯದಲ್ಲಿ ಕಣ್ಮನ ಸೆಳೆಯುವಂತಿರುವ ಈ ಪುಷ್ಕರಣಿ ಇನ್ನೂ ಪ್ರವಾಸಿಗರ ಕಣ್ಣಿಗೆ ಬೀಳದಿರಲು ಕಾರಣಗಳೇನಿರಬಹುದು?

ಹಳೇಬೀಡಿನಿಂದ ಹಗರೆ ರಸ್ತೆಯಲ್ಲಿ ಸ್ವಲ್ಪವೇ ದೂರದಲ್ಲಿರುವ ಕಿರುಗ್ರಾಮ ಹುಲಿಕೆರೆ. ಹಿಂದೊಮ್ಮೆ ಹೊಯ್ಸಳರ ರಾಜಧಾನಿಯಾಗಿದ್ದು ಈಗ ಹೇಳ ಹೆಸರಿಲ್ಲದಂತೆ ನಿರ್ನಾಮವಾಗಿರುವ ದ್ವಾರಸಮುದ್ರದ ಭಾಗವಾಗಿತ್ತು ಈ ಹುಲಿಕೆರೆ. ಇಲ್ಲಿ ಚಾರಿತ್ರಿಕ ಹಿನ್ನೆಲೆಯುಳ್ಳ ದೊಡ್ಡ ಪುಷ್ಕರಣಿಯಿದೆ. ಈ ಕಲ್ಯಾಣಿ ತಲುಪಲು ಸಾಗಬೇಕಾದ ದಾರಿ ಮಾತ್ರ ಕಿರಿದು. ಪ್ರವಾಸಿಗರು ಹುಡುಕಿಕೊಂಡು ಹೋಗಬೇಕೆಂದರೆ ಮಾರ್ಗದರ್ಶಿ ಫಲಕವೂ ಆಯಕಟ್ಟಿನ ಸ್ಥಳದಲ್ಲಿಲ್ಲ. ಹಾಗಾಗಿ ಹಾದಿ ಹುಡುಕುವುದು ನಮಗೂ ಕಷ್ಟವೇ ಆಯಿತು. ಆದರೆ ಈ ಭವ್ಯ ಪುಷ್ಕರಣಿಯ ದರ್ಶನವಾಗುತ್ತಿದ್ದಂತೆ ಹಳ್ಳಿಯಲ್ಲಿ ಹುದುಗಿರುವ ತಟಾಕ ತಲುಪಲು ಪಟ್ಟ ಶ್ರಮ ಸಾರ್ಥಕವೆನಿಸಿತು.

ಮೂರು ಹಂತಗಳಲ್ಲಿ ಒಟ್ಟು ಮೂವತ್ತು ಮೆಟ್ಟಿಲುಗಳನ್ನು ಹೊಂದಿರುವ ಚೌಕಾಕಾರದ ಕೊಳದ ಆಳ ಸುಮಾರು ಅರವತ್ತು ಅಡಿ. ನಾವು ಬೇಸಗೆಯ ದಿನದಲ್ಲಿ ವೀಕ್ಷಿಸಿದ್ದರಿಂದ ಒಂದು ಹನಿ ನೀರೂ ಇಲ್ಲದೆ ಈ ಕೊಳ ಬರಡಾಗಿ ಕಾಣುತ್ತಿತ್ತು. ನಡು ಹಂತದ ನಾಲ್ಕೂ ಬದಿಗಳಲ್ಲಿ ಒಟ್ಟಾರೆ 27